# ನಮ್ಮ ಪೂರ್ವಜರಿಗೆ ಸಂತೋಷ ತರೋಣ



ದಾಜಿ

ಪೂಜ್ಯ ಶ್ರೀ ಲಾಲಾಜಿ ಮಹಾರಾಜರ

153ನೇ ಜಯಂತ್ಯೋತ್ಸವದ ಸಂದರ್ಭದಲ್ಲಿ ನೀಡಿದ ಸಂದೇಶ

ಜನವರಿ 22, 23 ಮತ್ತು 24, 2026, ಕಾನ್ಹಾ ಶಾಂತಿ ವನಂ



# ನಮ್ಮ ಪೂರ್ವಜರಿಗೆ ಸಂತೋಷ ತರೋಣ

ಆತ್ಮೀಯರೆ,

ಪ್ರತಿ ವರ್ಷವೂ ಬಸಂತ ಪಂಚಮಿ ಆಗಮಿಸಿದಾಗ ನನ್ನ ಹೃದಯದಲ್ಲಿ ಅದೇನೋ ಆಗುತ್ತದೆ; ಅದನ್ನು ನಾನು ಸರಿಯಾಗಿ ವಿವರಿಸಲಾರೆ. ಹಳದಿ ಹೂವುಗಳು, ಗಾಳಿಗೆ ಮರಳಿ ಬರುತ್ತಿರುವ ಸುಖೋಷ್ಣ ಮತ್ತು ವಸಂತ ಋತುವಿನ ಪುಷ್ಪರಾಶಿ – ಇವೆಲ್ಲವೂ ನವೀಕರಣವನ್ನು ಪ್ರತಿನಿಧಿಸುತ್ತವೆ. ಆದರೆ, ದೈವೀ ಪ್ರಕಾಶ ಧರೆಗಿಳಿಯಲು ಇದೇ ದಿನವನ್ನು ಆಯ್ದುಕೊಂಡ ಕಾರಣ, ಈ ಪಥದಲ್ಲಿ ಸಾಗುತ್ತಿರುವ ನಮಗೆ ಈ ಸುದಿನ ಋತುವನ್ನು ಮೀರಿ ಸುಗಂಧವನ್ನು ಪಸರಿಸುತ್ತದೆ.

ಫೆಬ್ರವರಿ 2, 1873ರಂದು ಜನಿಸಿದ ವಿಭೂತಿ ಪುರುಷ, ಆಧ್ಯಾತ್ಮಿಕತೆಯ ಅನುಭವವನ್ನು ಜನರು ಪಡೆಯುವ ಬಗೆಯನ್ನು ಶಾಶ್ವತವಾಗಿ ಬದಲಾಯಿಸಿದರು. ಆ ಸಮಯದಲ್ಲಿ, ಜಗತ್ತು ಅಜ್ಞವಾಗಿತ್ತು. ಅದು ಹೇಗೆ ಸಾಧ್ಯ? ನಿಶ್ಶಬ್ದವಾಗಿ, ನಿರಾಡಂಬರವಾಗಿ ಬರುವ ಮಹಾತ್ಮರಿಗೆ ಸಾಮಾನ್ಯತೆಯ ಮುಸುಕಿರುತ್ತದೆ. ಆದರೆ ಪ್ರಕೃತಿಗೆ ತಿಳಿದಿತ್ತು, ಆ ದಿನವೇ ಅದು ಮೌನ ವಚನ ನೀಡಿತ್ತು.

ಸಾಧ್ವಿಯಾಗಿದ್ದ ಮಗುವಿನ ತಾಯಿಯ ಹೃದಯ ಭಕ್ತಿಯಿಂದ ತುಂಬಿ ತುಳುಕುತ್ತಿತ್ತು. ಒಮ್ಮೆ, ಆಹಾರವನ್ನು ಕೇಳಿಕೊಂಡು ಅವಧೂತನೊಬ್ಬ ಆಕೆಯ ಮನೆ ಬಾಗಿಲಿಗೆ ಬಂದಾಗ, ಊಟದಲ್ಲಿ ಮೀನನ್ನು ಬೇಡಿದನು. ಆದರೆ ಮಾಂಸಾಹಾರವನ್ನು ತಿನ್ನದ, ಬೇಯಿಸದ ಆಕೆಯ ಬಳಿ ಅದಿರಲಿಲ್ಲ. ದೇವರ ದಯೆಯಿಂದ, ಮನೆಯಲ್ಲಿದ್ದ ಚತುರ

ಪರಿಚಾರಿಕೆ ನೆರೆಯ ಮನೆಯಿಂದ ಎರಡು ಮೀನುಗಳನ್ನು ತಂದಳು. ಅದನ್ನು ಸೇವಿಸಿದ ನಂತರ ಸಂತನು, "ನಿನಗೇನು ಕೊರಗಿದೆ?" ಎಂದು ಕೇಳಿದನು. ಒಡತಿ ಸುಮ್ಮನಿದ್ದರೂ, ಸೇವಕಿ ಉತ್ತರಿಸಿದಳು, "ನನ್ನೊಡತಿಗೆ ಸಂತಾನದ ವಿನಾ ಮತ್ತೆಲ್ಲವೂ ಇದೆ."

ಸಂತನು ಗಾಢ ನೀಲಿ ಆಕಾಶವನ್ನೇ ದಿಟ್ಟಿಸುತ್ತ, "ಓಹ್!" ಎಂದು ಉದ್ಗರಿಸಿದನು. ಕೆಲನಿಮಿಷಗಳ ನಂತರ ಅರಳಿದ ಮುಖದೊಂದಿಗೆ ಎರಡು ಬೆರಳುಗಳನ್ನು ಗಗನದೆಡೆಗೆ ತೋರುತ್ತ, "ಒಂದು...ಎರಡು...ಒಂದು...ಎರಡು..." ಎಂದು ನುಡಿದು ಹೋದವ ಮತ್ತೆಂದೂ ಕಾಣಿಸಲಿಲ್ಲ.

ಮರುವರ್ಷ, ಮೊದಲ ಮಗ 1873ರ ಬಸಂತ ಪಂಚಮಿಯಂದು ಜನಿಸಿದನು. ಅವರೇ ಲಾಲಾಜಿಯೆಂದು ಕರೆಯಲ್ಪಡುವ, ಫತೇಹಗಢದ ಶ್ರೀ ರಾಮಚಂದ್ರರು.

ಈ ವಿಭೂತಿ ಪುರುಷನ ಬಗ್ಗೆ ಈಗಾಗಲೇ ಹೇಳಿರದೆ ಇರುವುದನ್ನು ನಾನೇನು ತಾನೆ ಹೇಳಲಿ? ಕವಿಗಳು ಪ್ರಯತ್ನಿಸಿದ್ದಾರೆ, ಪವಿತ್ರ ಗ್ರಂಥಗಳು ಅಂತಹ ವಿಶೇಷ ವ್ಯಕ್ತಿಗಳನ್ನು ಉಲ್ಲೇಖಿಸುತ್ತದೆ, ಹಾಗೆಯೆ ಟೆನಿಸನ್ ಬರೆದ ಶಬ್ದಗಳು ಅವರನ್ನೇ ಕುರಿತಾದುದು ಎಂದೆನಿಸುತ್ತದೆ:

*Thou seemeth human and divine,*
*The highest, holiest, manhood thou.*

(ನೀನು ಮಾನವನಂತೆ ಮತ್ತು ದೈವದಂತೆ ಕಾಣುವೆ, ಪುರುಷನಾದರೂ ನೀನು ಶ್ರೇಷ್ಠನು, ಪರಮ ಪವಿತ್ರನು)

ಇನ್ನೂ ಯೌವನಾವಸ್ಥೆಯಲ್ಲಿರುವಾಗ, ಕೇವಲ ಏಳು ತಿಂಗಳಿನಲ್ಲಿ, ಇತರರು ಅಗಣಿತ ಜನ್ಮವೆತ್ತಿಯೂ ಪಡೆಯಲಾಗದ ಆಧ್ಯಾತ್ಮಿಕ ಸ್ಥಿತಿಯನ್ನು ಅವರು ತಲುಪಿದರು. ದೈವೀ ಪ್ರಕಾಶವು, ಬೆಂಬತ್ತುವ ದೂರದ ಗುರಿಯಂತೆ ಅವರ ಮೇಲೆ ವರ್ಷಿಸಲಿಲ್ಲ; ಅದು ಅವರಲ್ಲಿ ಸಹಜವಾಗಿಯೆ ನೆಲೆಸಿತ್ತು. ಅವರು ಅದನ್ನು ಅನ್ವೇಷಿಸಲಿಲ್ಲ, ಅವರು ಪ್ರಕಾಶವೇ ತಾನಾಗಿದ್ದರು.

ಲಾಲಾಜಿಯ ಮೂಲಕ ವಿಸ್ಮೃತಗೊಂಡಿದ್ದ ಪರಂಪರೆಯು ಮನುಕುಲಕ್ಕಾಗಿ ಪುನಃಶ್ಚೇತನಗೊಂಡಿತು: ಅದು, ಜೀವನದ ಸಾರಸತ್ತ್ವವಾದ, *ಪ್ರಾಣಸ್ಯ ಪ್ರಾಣವೆಂದು* ಕರೆಯಲ್ಪಡುವ, ಪ್ರಾಣಾಹುತಿ ಎಂಬ ಪವಿತ್ರ ವಿಜ್ಞಾನ. ಈ ಗಹನವಾದ ಜ್ಞಾನವನ್ನು ಅಯೋಧ್ಯೆಯ ಶ್ರೀ ರಾಮಚಂದ್ರನಿಗೂ ಎಪ್ಪತ್ತೂರು ಪೀಳಿಗೆ ಮೊದಲಿನ ಪೂಜ್ಯ ಶ್ರೀ ರಿಷಭದೇವಜಿ ಮಹಾರಾಜ್‌ರವರು ಪರಿಚಯಿಸಿ, ಜೀವದ ಸತ್ತ್ವವನ್ನು ವರ್ಗಾಯಿಸುವ ಈ ಅತಿಸೂಕ್ಷ್ಮ ವಿಜ್ಞಾನವನ್ನು ಅನಾವರಣಗೊಳಿಸಿದರು.

ದೈವೀ ಪ್ರಾಣಾಹುತಿಯ ಮೂಲಕ, ಪ್ರಜ್ಞೆಯ ಉನ್ನತಲೋಕದ ದ್ವಾರಗಳು ತೆರೆಯುತ್ತವೆ. ಸಾಧಕರು ಬ್ರಹ್ಮವಿದ್ಯೆಯ ನಿಲುಕನ್ನು ಜೀವನದಿಂದ ವಿರಕ್ತನಾಗಿ ಸನ್ಯಾಸ ತೆಗೆದುಕೊಳ್ಳುವುದರ ಮೂಲಕ ಪಡೆಯದೆ, ಸಾಮರಸ್ಯಪೂರ್ಣ ಸಮನ್ವಯದಿಂದ ಪಡೆಯುತ್ತಾರೆ. ಅಂದರೆ, ಪ್ರಪಂಚದಲ್ಲಿ ಆನಂದದಿಂದ ಜೀವಿಸುತ್ತಲೇ ಪರತತ್ತ್ವದೊಂದಿಗೆ ಆಂತರಿಕವಾಗಿ ಒಂದಾಗಿರುವುದು, ಹಾಗು ಗೃಹಸ್ಥ ಜೀವನದಲ್ಲಿ ಐಹಿಕ ಮತ್ತು ಆಧ್ಯಾತ್ಮಿಕ ಕರ್ತವ್ಯಗಳನ್ನು ಪರಿಪಾಲಿಸುವುದು. ದೈವೀ ಪ್ರಾಣಾಹುತಿಯ ಈ ಸಜೀವ ಪ್ರವಹನವು ಸಾಧಕನನ್ನು, ಸಮಾಧಿ ಸ್ಥಿತಿಗಳಿಗೆ ಕ್ಷಿಪ್ರಗತಿಯಲ್ಲಿ ಕರೆದೊಯ್ಯುತ್ತದೆ; ಸಾಮಾನ್ಯವಾಗಿ ಶ್ರದ್ಧೆಯಿಂದ ಮಾಡುವ ಅಭ್ಯಾಸದ ಮೂಲಕ ಅತ್ಯಂತ ಕಡಿಮೆ ಅವಧಿಯಲ್ಲಿ ಹಾಗಾಗುತ್ತದೆ.

ಆದರೂ, ಮಾನವ ಇತಿಹಾಸ ಮುಂದುವರಿದಂತೆ, ಈ ಅಮೂಲ್ಯ ವಿಜ್ಞಾನವು ಮಾನವ ಅರಿವಿನಿಂದ ನಿಧಾನವಾಗಿ ಮಾಸುತ್ತ, ಕೊನೆಯಲ್ಲಿ ಮರೆಯಾಗಿಬಿಟ್ಟಿತು. ನಿಯತಿ ಮಧ್ಯ ಪ್ರವೇಶಿಸುವವರೆಗೂ ಅದು ಅವ್ಯಕ್ತವಾಗಿದ್ದು, ಲಾಲಾಜಿ ಮಹಾರಾಜರು ಪವಿತ್ರ ಧಾರೆಯನ್ನು ಮರುಶೋಧಿಸಿ, ಪುನಶ್ಚೇತನಗೊಳಿಸುವ ಮೂಲಕ, ಪರಮಪದದೆಡೆಗಿನ ನೇರ, ಸಜೀವ ಮಾರ್ಗವನ್ನು ಮನುಕುಲಕ್ಕಾಗಿ ಪುನಸ್ಥಾಪಿಸಿದರು. ಇದು ಲಾಲಾಜಿಯವರ ಕಾಣಿಕೆ: ತತ್ತ್ವಜ್ಞಾನ ಹಾಗು



ದೈವೀ ಪ್ರಾಣಾಹುತಿಯ ಮೂಲಕ, ಪ್ರಜ್ಞೆಯ ಉನ್ನತಲೋಕದ ದ್ವಾರಗಳು ತೆರೆಯುತ್ತವೆ. ಸಾಧಕರು *ಬ್ರಹ್ಮವಿದ್ಯೆಯ* ನಿಲುಕನ್ನು ಜೀವನದಿಂದ ವಿರಕ್ತನಾಗಿ *ಸನ್ಯಾಸ* ತೆಗೆದುಕೊಳ್ಳುವುದರ ಮೂಲಕ ಪಡೆಯದೆ, ಸಾಮರಸ್ಯಪೂರ್ಣ ಸಮನ್ವಯದಿಂದ ಪಡೆಯುತ್ತಾರೆ. ಅಂದರೆ, ಪ್ರಪಂಚದಲ್ಲಿ ಆನಂದದಿಂದ ಜೀವಿಸುತ್ತಲೇ ಪರತತ್ತ್ವದೊಂದಿಗೆ ಆಂತರಿಕವಾಗಿ ಒಂದಾಗಿರುವುದು, ಹಾಗು *ಗೃಹಸ್ಥ* ಜೀವನದಲ್ಲಿ ಐಹಿಕ ಮತ್ತು ಆಧ್ಯಾತ್ಮಿಕ ಕರ್ತವ್ಯಗಳನ್ನು ಪರಿಪಾಲಿಸುವುದು.

ಬೋಧನೆಯಷ್ಟೇ ಅಲ್ಲ, ಹೃದಯದಿಂದ ಹೃದಯಕ್ಕೆ ಆಧ್ಯಾತ್ಮಿಕ ಸತ್ತ್ವದ ನಿಜವಾದ ಪ್ರವಹನ.

ನಂತರ ಬಂದವರೇ ಅವರ ಶಿಷ್ಯ.

ಷಹಜಹಾನ್‌ಪುರದಲ್ಲಿ, ರಾಮಚಂದ್ರನೆಂಬ ಯುವಕ ಫತೇಹಗಢದ ಸಂತರ ಬಗ್ಗೆ ಕೇಳಿದ್ದ. ಲಾಲಾಜಿಯವರ ಬಗ್ಗೆ ಕೇವಲ ಪ್ರಸ್ತಾಪಿಸಿದ ಕ್ಷಣವೆ ಅವರೊಳಗೆ ರೋಮಾಂಚನವಾಗಿ, ಅವರನ್ನು ಭೇಟಿಯಾಗಲು ತೆರಳಿದನು. ಜೂನ್ 3, 1922ರಂದು ಆದ ಪ್ರಥಮ ಭೇಟಿಯಿಂದ ಆತನ ಜೀವನ ಶಾಶ್ವತವಾಗಿ ಬದಲಾಯಿತು.

ಅವರು ನಂತರ ಬರೆದಿದ್ದಾರೆ: "ನಾನು ನನ್ನ ಗುರುಗಳ ಬಳಿ ಮೊದಲ ಬಾರಿ ಬಂದಾಗ, ನಾನು ಸರಿಸಾಟಿಯಿಲ್ಲದ ಮನಃಸ್ಥಿತಿಯನ್ನು ಅನುಭವಿಸಿದೆ. ಜೀವನದ ಆ ಕ್ಷಣದಲ್ಲಿ ನಾನು ಅನುಭವಿಸಿದ ಮಹದಾನಂದವನ್ನು ನಾನು ವಿವರವಾಗಿ ವರ್ಣಿಸಲಾರೆ. ಆ ದಿನದಿಂದ, ನಾನು ಹೊಸ ಜೀವನವನ್ನಾರಂಭಿಸಿದೆ. ಎಲ್ಲವೂ ಬದಲಾದಂತೆ ಕಂಡಿತು. ಜಗತ್ತು ವಿಭಿನ್ನವಾಗಿ ಗೋಚರವಾಯಿತು."

ಹೀಗೆ, ಆಧ್ಯಾತ್ಮಿಕ ಇತಿಹಾಸದಲ್ಲಿ ಎಲ್ಲರನ್ನೂ ಮೀರಿಸುವ ಒಂದು ಪ್ರೇಮಕಥನ ಆರಂಭವಾಯಿತು. ನಾನು ಈ ಪದಗಳನ್ನು ಲಘುವಾಗಿ ಬಳಸಲಾರೆ; ಏಕೆಂದರೆ ಲಾಲಾಜಿ ಮತ್ತವರ ಶಿಷ್ಯನ ನಡುವೆ ಅನಾವರಣಗೊಂಡುದುದು ಸಾಧಾರಣ ಭಕ್ತಿಯಲ್ಲ. ಶಿಷ್ಯನು ಗುರುವಿನ ಮೇಲಿಡುವ ಗೌರವಾದರಕ್ಕಿಂತ ಎಷ್ಟೋ ಮೇಲಿನದು. ಅದು ಭಾಷೆಯನ್ನೂ ಸೋಲಿಸುವ ವಿಷಯವಾಗಿದ್ದು, ಊರ್ಧ್ವಲೋಕದ ಜೀವಿಗಳೂ ವಿಸ್ಮಿತರಾಗುವಂತೆ ಮಾಡಿರುವಂಥದ್ದು.

ನಾನು ಈ ಪದಗಳನ್ನು ಲಘುವಾಗಿ ಬಳಸಲಾರೆ; ಏಕೆಂದರೆ ಲಾಲಾಜಿ ಮತ್ತವರ ಶಿಷ್ಯನ ನಡುವೆ ಅನಾವರಣಗೊಂಡುದುದು ಸಾಧಾರಣ ಭಕ್ತಿಯಲ್ಲ. ಶಿಷ್ಯನು ಗುರುವಿನ ಮೇಲಿಡುವ ಗೌರವಾದರಕ್ಕಿಂತ ಎಷ್ಟೋ ಮೇಲಿನದು. ಅದು ಭಾಷೆಯನ್ನೂ ಸೋಲಿಸುವ ವಿಷಯವಾಗಿದ್ದು, ಊರ್ಧ್ವಲೋಕದ ಜೀವಿಗಳೂ ವಿಸ್ಮಿತರಾಗುವಂತೆ ಮಾಡಿರುವಂಥದ್ದು.

ತಮ್ಮಿಬ್ಬರ ಬಾಂಧವ್ಯದ ಕುರಿತಾಗಿ ಬಾಬೂಜಿಯವರು ಹೀಗೊಮ್ಮೆ ಹೇಳಿದ್ದಾರೆ: "ನಾವು ಆಧ್ಯಾತ್ಮಿಕವಾಗಿ ಸಂಪೂರ್ಣ ಐಕ್ಯವಾಗಿ, ನಮ್ಮ ಹೃದಯಗಳು ಕೇವಲ ಒಂದೇ ಆಗಿರುವಂತೆ ಪರಾಸರಣದಲ್ಲಿದ್ದೆವು (osmosis). ಪ್ರಿಯತಮನಿಗೆ ಹೋಲಿಸಿದರೆ ಬೇರೆ ಯಾವುದೂ ಅತಿ ಸೊಗಸಲ್ಲ; ಅಂತಹ ಪ್ರೇಮ ನಮ್ಮನ್ನು ಎಲ್ಲೆ ಮೀರುವಂತೆ ಪ್ರಚೋದಿಸಲು, ಅವರನ್ನು ಸಂತೃಪ್ತಗೊಳಿಸಲು ಸಾಧ್ಯವಾದುದೆಲ್ಲವನ್ನೂ ಮಾಡಲೆತ್ನಿಸಲು ನೆರವಾಗುತ್ತದೆ."

ಮತ್ತೊಂದೆಡೆ, ಲಾಲಾಜಿಯವರ ವಿನಾ ತಾವು ಒಂದು ಕ್ಷಣವೂ ಉಳಿಯಲಾರರೆಂದು ಅವರು ಒಪ್ಪಿಕೊಂಡಿದ್ದಾರೆ. ಅವರು ದಶಕಗಳ ಮೊದಲೇ ನಿರ್ಗಮಿಸಿದ ಲಾಲಾಜಿಯವರ ಭೌತಿಕ ಅಸ್ತಿತ್ವದ ಬಗ್ಗೆ ಹೇಳುತ್ತಿರಲಿಲ್ಲ; ಅವರು ತಮ್ಮ ಉಸಿರಿನ ಉಸಿರಾದ, *ಪ್ರಾಣಸ್ಯ ಪ್ರಾಣವಾದ*, ಜೀವದ ಜೀವವಾದ ಲಾಲಾಜಿಯವರ ಬಗ್ಗೆ ಹೇಳುತ್ತಿದ್ದರು.

ನಾನು ಅದನ್ನು ಓದಿದಾಗಲೆಲ್ಲ ನನ್ನಲ್ಲಿ ಕಣ್ಣೀರು ತರಿಸುವ ವಿಷಯವೊಂದನ್ನು ನಿಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ.

ಲಾಲಾಜಿಯವರ ಉಕ್ತಲೇಖನಗಳಲ್ಲಿ ಬಾಬೂಜಿಯವರ ಬಗೆಗಿನ ಒಂದು ವಾಕ್ಯವು, ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಬಾಬೂಜಿಯವರು ತಮ್ಮ ಪತ್ನಿಯೊಂದಿಗಿನ ಪವಿತ್ರ ಕ್ಷಣಗಳಲ್ಲೂ ಕೂಡ, ಒಂದು ಉಸಿರಿನ ಕಾಲವೂ ಕೂಡ, ತಮ್ಮ ಗುರುಗಳನ್ನೆಂದಿಗೂ ಹೃದಯದಿಂದ ದೂರವಿರಿಸಲಿಲ್ಲವೆಂಬುದನ್ನು ಲಾಲಾಜಿಯವರು ಗಮನಿಸಿದ್ದರು. ಪ್ರಾಪಂಚಿಕ ಜೀವನದ ಪ್ರತಿಯೊಂದು ಸನ್ನಿವೇಶದಲ್ಲೂ ಅವರ ಸಂಪರ್ಕ ಅವಿಚ್ಛಿನ್ನವಾಗಿತ್ತು.

ನಿಜಾರ್ಥದಲ್ಲಿ ಇದು ಬ್ರಹ್ಮಚರ್ಯ: ಪ್ರಾಪಂಚಿಕ ಜೀವನದ ಅಭಾವವಲ್ಲ, ಆ ಜೀವನದೊಳಗೆ ನಿರಂತರ ಸ್ಮರಣೆಯ ಉಪಸ್ಥಿತಿ. ಬಾಬೂಜಿಯವರ ದೇಹ ಜಗತ್ತಿನೊಂದಿಗೆ ಸಕ್ರಿಯವಾಗಿದ್ದರೂ, ಅವರ ಗಮನ ಉನ್ನತವಾದುದರಲ್ಲಿ ನೆಲೆಸಿತ್ತು.

ಅಂತಹ ಸ್ಮರಣೆಯನ್ನು ಉಳಿಸಿಕೊಳ್ಳುವ ಪ್ರೇಮವೆಂಥದ್ದು? ಅಂತಹ ನಿರಂತರತೆಯನ್ನು ನಿರ್ವಹಿಸುವ ಭಕ್ತಿಯೆಂಥದು?

ಈಗ ನಾನು ನಿಮಗೆ ಅಸಾಧಾರಣವಾದ ಒಂದನ್ನು ಹೇಳುತ್ತೇನೆ.

'ದಿವ್ಯಲೋಕದಿಂದ ಸಂದೇಶಗಳು' ಪುಸ್ತಕದಲ್ಲಿ 1945ರ ಮಾರ್ಚ್ 21ರಂದು ದಾಖಲಾದ ಅಂತಃಸಲ್ಲಾಪದಲ್ಲಿ, ಸುವರ್ಣಾಕ್ಷರಗಳಲ್ಲಿ ಬರೆಯತಕ್ಕ ಸಂವಹನವಿದೆ. ಮೊದಲಿಗೆ, ಆತ್ಮಗಳ ಕೇಸರಿಯಾದ ಸ್ವಾಮಿ ವಿವೇಕಾನಂದರು, ಲಾಲಾಜಿಯವರಿಗೆ ಬಾಬೂಜಿ ಮೇಲಿದ್ದ ಪ್ರೇಮದ ಕುರಿತಾಗಿ ಹೇಳುತ್ತಾರೆ; ನಂತರ ಕೃಷ್ಣಪರಮಾತ್ಮನು ಬಾಬೂಜಿಯವರಿಗೆ ಲಾಲಾಜಿ ಮೇಲಿದ್ದ ಪ್ರೇಮದ ಬಗ್ಗೆ ಹೇಳುತ್ತಾನೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ನಮ್ಮ ಪ್ರಭುಗಳು (ಲಾಲಾಜಿ), ಅವರಿಗೆ ನಿನ್ನ ಮೇಲಿರುವ ಪ್ರೀತಿಯ ವಿಷಯದಲ್ಲಿ ಹೇಳುವುದೆಲ್ಲವೂ ವಾಸ್ತವ ಸತ್ಯ. ಅವರಿಗೆ ನಿನ್ನಲ್ಲಿ ಉತ್ಕಟ ಪ್ರೇಮವಿದೆ. ನನ್ನ ಜೀವನಪರ್ಯಂತ ಇಂತಹ ಉದಾಹರಣೆಯನ್ನು ಎಲ್ಲಿಯೂ ನೋಡಲಿಲ್ಲ." ಅವರು ನಂತರ ಹೇಳುತ್ತಾರೆ, "ಜನರು ದೇವರಿಗಾಗಿ ತಮ್ಮ ಮನೆ–ಮಾರುಗಳನ್ನು ತ್ಯಜಿಸುತ್ತಾರೆ: ಅವರು ನಿನಗಾಗಿ ಅವರ ಮೂಲಧಾಮವನ್ನು ತೊರೆದರು. ಇದು ಮುಕ್ತಾತ್ಮರಿಂದ ಯಾವ ಕಾಲಕ್ಕೂ ನಿರೀಕ್ಷಿಸಬಹುದಾದ ಅತ್ಯಂತ ದೊಡ್ಡ ತ್ಯಾಗ." ಇಲ್ಲಿ ಲಾಲಾಜಿಯವರು ಮಧ್ಯೆ ಪ್ರವೇಶಿಸಿ ಈ ಸಂವಾದವನ್ನು ತಮ್ಮ ದಿನಚರಿಯಲ್ಲಿ ಬರೆಯದಿರಲು ಆದೇಶಿಸುತ್ತಾರೆ.

ಮುಕ್ತಾತ್ಮರಾದ ಗುರು ಲಾಲಾಜಿಯವರು, ತಮ್ಮ ಶಿಷ್ಯ ಬಾಬೂಜಿಯವರಿಗಾಗಿ ತಮ್ಮ ಭಂಡಾರ, ತಮ್ಮ ಸ್ವರ್ಗೀಯ ನೆಲೆಯನ್ನು ತೊರೆದರು. ಶಿಷ್ಯನಿಗಾಗಿ ಸದ್ಗುರು ಇಳಿದು ಬಂದರು; ಸ್ವರ್ಗವೇ ಧರೆಗಿಳಿಯಿತು.

ನಂತರ ಶ್ರೀ ಕೃಷ್ಣ ಹೇಳುವ ಮಾತುಗಳನ್ನು ನಾನು ಬರೆಯುತ್ತಿರಲು ನನ್ನ ಕೈಗಳು ನಡುಗುತ್ತಿವೆ: "ಸ್ವಾಮಿ ವಿವೇಕಾನಂದರು ಹೇಳಿದುದು ಅಕ್ಷರಶಃ ಸತ್ಯ.. ಪ್ರೇಮದ ವಿಷಯದಲ್ಲಿ ನೀನು ರಾಧಾಳನ್ನೂ ಮೀರಿಸಿರುವೆ ಎಂದು ಬರೆಯುವುದರಲ್ಲಿ ಯಾವ ತೊಂದರೆಯೂ ಇಲ್ಲ... ರಾಧಾಳ ಪ್ರೇಮ ಈಗ ನಿನ್ನ ನಂತರದ ದ್ವಿತೀಯ ಸ್ಥಾನದಲ್ಲಿದೆ."

ಇದರರ್ಥ ನಿಮಗೆ ತಿಳಿಯಿತೆ? ಕೃಷ್ಣನಿಗಾಗಿ ರಾಧೆಯ ಪ್ರೇಮವನ್ನು ಸಹಸ್ರಾರು ವರ್ಷಗಳಿಂದಲೂ ಭಕ್ತಿಯ ಪರಾಕಾಷ್ಠೆಯೆಂದು ನಂಬಲಾಗಿದೆ. ರಾಧೆಯ

ನಾಮವೊಂದೇ ದೈವೀಪ್ರೇಮಕ್ಕೆ ಪರ್ಯಾಯ ಪದವಾಗಿದ್ದರೂ ಸಹ, ಲಾಲಾಜಿಯವರ ಮೇಲಿನ ಪ್ರೇಮದಲ್ಲಿ ಬಾಬೂಜಿಯವರು ರಾಧಾಳನ್ನೂ ಮೀರಿಸಿದ್ದಾರೆ ಎಂದು ಕೃಷ್ಣ ಭಗವಾನನು ಘೋಷಿಸುತ್ತಾನೆ.

ಆದರೆ ಈ ಸಂಗತಿ ಇಲ್ಲಿಗೇ ನಿಲ್ಲುವುದಿಲ್ಲ. ಮೂರು ದಿನಗಳ ನಂತರ, ಇದು ಸಮಸ್ತ ಸೃಷ್ಟಿಯಲ್ಲೇ ಅಭೂತಪೂರ್ವವಾದ ಪರಾಕಾಷ್ಠೆಗೆ ತಲುಪುತ್ತದೆ.

ಮಾರ್ಚ್ 24, 1945ರ ಶುಭದಿನದಂದು, ಪರತತ್ತ್ವವೇ ಬಾಬೂಜಿಯವರಿಗೆ ದೀಕ್ಷೆ ನೀಡುವಂತೆ ಲಾಲಾಜಿಯವರು ವ್ಯವಸ್ಥೆ ಮಾಡುತ್ತಾರೆ. ಇದಕ್ಕೆ ಸಾಕ್ಷಿಯಾದ ಶ್ರೀ ಕೃಷ್ಣನು, "ಇದು ಬಹಳ ಶುಭ ದಿನವಾಗಿದ್ದು, ನಿನ್ನ ಪೂಜ್ಯ ಗುರುಗಳು ನಿನಗೆ ಪರತತ್ತ್ವದಿಂದ ನೇರವಾಗಿ ದೀಕ್ಷೆ ಕೊಡಿಸಿದ್ದಾರೆ. ವಾಸ್ತವದಲ್ಲಿ ಇದನ್ನೇ ದೀಕ್ಷೆಯೆನ್ನುವುದು. ಇದು ಈ ಸೃಷ್ಟಿಯಲ್ಲಿನ ಮೊದಲ ಉದಾಹರಣೆ." ಎಂದು ಘೋಷಿಸುತ್ತಾನೆ.

ಸ್ವಾಮಿ ವಿವೇಕಾನಂದರು ದನಿಗೂಡಿಸುತ್ತಾರೆ, "ಪರತತ್ತ್ವದಿಂದ ನೀನು ನೇರವಾಗಿ ದೀಕ್ಷೆಯನ್ನು ಪಡೆದ ಸುದ್ದಿ ಕೇಳಿ ನನಗೆ ಪರಮಾನಂದವಾಗಿದೆ. ಜಗತ್ತಿನಾರಂಭದ ನಂತರದ ಮೊದಲ ಉದಾಹರಣೆಯಿದು."

ಈಗ, ಕೊಂಚ ತಡೆಯಿರಿ ಹಾಗು ವಿಸ್ಮಯದಿಂದ ನನ್ನ ಹೃದಯ ಹಿಂಡುವ ವಿಷಯವನ್ನು ನೋಡಿ.

ಈ ಸರ್ವೋಚ್ಚ ಸನ್ನಿವೇಶದ ನಂತರ, ಲಾಲಾಜಿಯವರು ನೀಡುವ ಶಾಂತ ಹೇಳಿಕೆ ಅವರ ನಿಸ್ವಾರ್ಥತೆಯ ಆಳವನ್ನು ತೋರ್ಪಡಿಸುತ್ತದೆ. ಅವರು, "ನೇರ ದೀಕ್ಷೆಯು ಸಂಪೂರ್ಣವಾಗಿ ನನ್ನ ವಿಧಾನ. ಇಲ್ಲಿಯವರೆಗೆ ಇದು ಯಾರ ಗ್ರಹಿಕೆಗೂ ಬಂದಿರಲಿಲ್ಲ ಮತ್ತು ಕಾರ್ಯರೂಪಕ್ಕೆ ತರಲಾಗಿರಲಿಲ್ಲ" ಎಂದು ಹೇಳುತ್ತಾರೆ.



ಈ ಸರ್ವೋಚ್ಚ ಸನ್ನಿವೇಶದ ನಂತರ, ಲಾಲಾಜಿಯವರು ನೀಡುವ ಶಾಂತ ಹೇಳಿಕೆ ಅವರ ನಿಸ್ವಾರ್ಥತೆಯ ಆಳವನ್ನು ತೋರ್ಪಡಿಸುತ್ತದೆ. ಅವರು, "ನೇರ ದೀಕ್ಷೆಯು ಸಂಪೂರ್ಣವಾಗಿ ನನ್ನ ವಿಧಾನ. ಇಲ್ಲಿಯವರೆಗೆ ಇದು ಯಾರ ಗ್ರಹಿಕೆಗೂ ಬಂದಿರಲಿಲ್ಲ ಮತ್ತು ಕಾರ್ಯರೂಪಕ್ಕೆ ತರಲಾಗಿರಲಿಲ್ಲ" ಎಂದು ಹೇಳುತ್ತಾರೆ.

ಇದರ ಅರ್ಥವನ್ನು ಗ್ರಹಿಸಬಲ್ಲಿರಾ? ಲಾಲಾಜಿಯವರಿಗೆ ಈ ವಿಧಾನ ತಿಳಿದಿತ್ತು, ಏಕೆಂದರೆ ಇದು ಸ್ವತಃ ಅವರ ಶೋಧನೆಯಾಗಿತ್ತು. ಅವರ ಜೀವಿತಕಾಲದಲ್ಲಿ, ಈ ಮೊದಲು ಬೇರಾವ ಆತ್ಮವೂ ಗ್ರಹಿಸಲಾರದ್ದನ್ನು ಅವರು ಗ್ರಹಿಸಿದ್ದರು: ಅದುವೇ ಪರತತ್ತ್ವದಿಂದ ನೇರ ದೀಕ್ಷೆ. ಅವರದನ್ನು ತಮಗಾಗಿ ಬಳಸಿಕೊಳ್ಳಬಹುದಿತ್ತು, ಆದರೆ ಅವರು ಹಾಗೆ ಮಾಡಲಿಲ್ಲ. ಅವರು ಪರಮೋಚ್ಚ ರಹಸ್ಯವನ್ನು ತಮ್ಮೊಳಗೆ ಅಡಗಿಸಿಟ್ಟು, ತಮ್ಮ ಪ್ರಿಯ ಶಿಷ್ಯ ಅಂತಹ ಕಾಣಿಕೆಯನ್ನು ಸ್ವೀಕರಿಸುವ ಸ್ಥಿತಿಯನ್ನು ತಲುಪುವವರೆಗೂ ನಿರೀಕ್ಷಿಸಿದರು. ಬಾಬೂಜಿಯವರು ಆ ಉನ್ನತ ಸ್ಥಿತಿಯನ್ನು ತಲುಪಿದೊಡನೆ, ಆ ವಿಧಾನವನ್ನು ತಮ್ಮ ಶಿಷ್ಯನಿಗಾಗಿ ಬಳಸಿದರು.

ಶಿಷ್ಯನನ್ನು ಮುಂದಿರಿಸಿದ ಗುರು, ತಾವೂ ಸಹ ತೆಗೆದುಕೊಳ್ಳದಿರುವುದನ್ನು ಆತನಿಗೆ ನೀಡಿದರು. ಇಂತಹ ಪ್ರೇಮವು ತರ್ಕವನ್ನು ಮೀರಿದುದಾಗಿದೆ; ಪ್ರಾಯಶಃ ಹೆತ್ತವರು ಮಕ್ಕಳಿಗಾಗಿ ಮಾಡುವ ತ್ಯಾಗ ಅಥವಾ ಪ್ರೇಮಿಯು ಪ್ರಿಯತಮನಿಗಾಗಿ ಎಲ್ಲವನ್ನೂ ಸಮರ್ಪಿಸುವುದಕ್ಕಿಂತಲೂ ಮಹತ್ತಾಗಿದೆ. ಇಲ್ಲಿ, ಪರಮೋಚ್ಚ ಆಧ್ಯಾತ್ಮಿಕ ಕಾಣಿಕೆಯನ್ನು ಶೋಧಿಸಿದ ಗುರುವು, ಅದನ್ನು ತನ್ನ ಶಿಷ್ಯನಿಗೆ ನೀಡಿ, ತಾವು ಹಿನ್ನೆಲೆಯಲ್ಲಿದ್ದು, ತಾವು ಬಯಸದ ಉನ್ನತ ಸ್ಥಿತಿಗಳಿಗೆ ಶಿಷ್ಯನು ಮೇಲೇರುವುದನ್ನು ಕಂಡು ತೃಪ್ತರಾಗುತ್ತಾರೆ.

ಅಂತಹ ಪರಮೋಚ್ಚ ಕಾಣಿಕೆಯನ್ನು ನೀಡಿದ ನಂತರ ಲಾಲಾಜಿಯವರು ತಮ್ಮ ಬಗ್ಗೆ ಏನು ಹೇಳುತ್ತಾರೆ? ಅವರು ಪರ್ಶಿಯಾದ ದ್ವಿಪದಿಯೊಂದನ್ನು ಉಲ್ಲೇಖಿಸುತ್ತಾರೆ: "ಸಾವಿರಾರು ಗುಲಾಮರ ಒಡೆಯನಾದ ಸುಲ್ತಾನ ಮಹಮೂದ್ ಘಜ್ನವಿಯು ಎಂತಹ ದುಃಸ್ಥಿತಿಗೆ ಇಳಿದನೆಂದರೆ, ಆತನ ಸ್ಥಿತಿ ಗುಲಾಮರ ಗುಲಾಮನದಾಗಿತ್ತು." ನಂತರ ಲಾಲಾಜಿಯವರು ಮುಂದುವರಿಸುತ್ತಾರೆ, "ನನ್ನ ಸ್ಥಿತಿಯೂ ಅದೇ ಆಗಿದೆ."

ಗುರುಗಳ ಪರಮ ಗುರು, ಕಳೆದುಹೋದುದನ್ನು ಮರಳಿ ತಂದ ವಿಭೂತಿ ಪುರುಷ, ಯಾರ ಮೂಲಕ ಸಮಸ್ತ ಮನುಕುಲಕ್ಕೆ ಪ್ರಾಣಾಹುತಿ ಪ್ರವಹಿಸುವುದೊ, ಅಂಥವರು ತಮ್ಮನ್ನು, "ಗುಲಾಮನ ಗುಲಾಮ" ಎಂದು ಬಣ್ಣಿಸುತ್ತಾರೆ. ಏಕೆಂದರೆ ಅವರು ತಮ್ಮ ಶಿಷ್ಯನಿಗೆ ತಮಗಿಂತಲೂ ಮಹೋನ್ನತವಾಗಿರುವುದನ್ನು ನೀಡಿದ್ದರು.

ಇಲ್ಲಿ, ತಮ್ಮ ಶಿಷ್ಯನು ಪರಮೋನ್ನತ ಫಲದ ರುಚಿಯನ್ನು ಮೊದಲು ಸವಿಯಲೆಂದು ತಮ್ಮನ್ನು ತಾವು ತಡೆದ ಗುರುವಿನ ಉನ್ನತ ಪ್ರೇಮವನ್ನು ನಾವು ಕಾಣಬಲ್ಲೆವು. ಅವರ



ಇಲ್ಲಿ, ತಮ್ಮ ಶಿಷ್ಯನು ಪರಮೋನ್ನತ ಫಲದ ರುಚಿಯನ್ನು ಮೊದಲು ಸವಿಯಲೆಂದು ತಮ್ಮನ್ನು ತಾವು ತಡೆದ ಗುರುವಿನ ಉನ್ನತ ಪ್ರೇಮವನ್ನು ನಾವು ಕಾಣಬಲ್ಲೆವು. ಅವರ ಹೃದಯ ಅದೆಷ್ಟು ಉದಾತ್ತವಾಗಿತ್ತೆಂದರೆ, ಸೃಷ್ಟಿಯ ಪರಮ ರಹಸ್ಯವನ್ನು ಅವರು ಶೋಧಿಸಿದಾಗ ಅದನ್ನು ಮತ್ತೊಬ್ಬರಿಗೆ ಉಡುಗೊರೆ ನೀಡಿದರು.

ಹೃದಯ ಅದೆಷ್ಟು ಉದಾತ್ತವಾಗಿತ್ತೆಂದರೆ, ಸೃಷ್ಟಿಯ ಪರಮ ರಹಸ್ಯವನ್ನು ಅವರು ಶೋಧಿಸಿದಾಗ ಅದನ್ನು ಮತ್ತೊಬ್ಬರಿಗೆ ಉಡುಗೊರೆ ನೀಡಿದರು. ಆದರೆ ಇದನ್ನು ತ್ಯಾಗವೆಂದು ಕರೆಯುವುದರಿಂದ, ನಿಜವಾದ ಗುರುವಿನ ಹೃದಯವನ್ನು ಅಪಾರ್ಥ ಮಾಡಿಕೊಂಡಂತಾಗುತ್ತದೆ. ಈ ಕಾಣಿಕೆಯು ಲಾಲಾಜಿಯವರಿಗೆ ಪರಮಾನಂದದ ಸ್ರೋತವಾಗಿತ್ತು.

ವಾಸ್ತವದಲ್ಲಿ, ತನ್ನ ಶಿಷ್ಯನು ತನ್ನನ್ನೂ ಮೀರಿಸುವುದು, ಪ್ರಿಯನು ಉನ್ನತಿಗೇರುವುದು, ಎಲ್ಲವನ್ನೂ ನೀಡಿ ಪೂರ್ಣತೆಯನ್ನು ಮಾತ್ರ ಅನುಭವಿಸುವುದು – ಗುರುವಿಗೆ ಅತೀವ ಆನಂದವನ್ನು ನೀಡುತ್ತದೆ. ತನ್ನ ಮಗುವಿಗೆ ತಿನ್ನಿಸುವ ತಾಯಿಯಾಗಲಿ ಅಥವಾ ಸಾಗರವನ್ನು ಸೇರುವ ನದಿಯಾಗಲಿ ತ್ಯಾಗ ಮಾಡುವುದಿಲ್ಲ. ಬಾಬೂಜಿಯವರು ಪರತತ್ತ್ವದಿಂದ ನೇರ ದೀಕ್ಷೆ ಪಡೆಯುವ ಪ್ರಥಮ ಮಾನವನಾಗುವಂತೆ ವ್ಯವಸ್ಥೆ ಮಾಡಿದ ಲಾಲಾಜಿಯವರಿಗೆ, ಅದು ಪೂರ್ಣತೆ ಹಾಗು ಪರಮಾನಂದದ ಮೂಲವೂ ಆಗಿತ್ತು.

ಪ್ರೇಮವೆಂದರೆ ಇದು. ಮಾರ್ಗವೆಂದರೆ ಇದು. ಆದ್ದರಿಂದಲೆ ನಾವು ಬಸಂತ ಪಂಚಮಿಯನ್ನು ಆಚರಿಸುತ್ತೇವೆ.

ಪ್ರಸ್ತುತ ಕಾಲದ ಕುರಿತಾಗಿ ಲಾಲಾಜಿಯವರು ಹೇಳಿದ್ದಾರೆ, "ಇಂತಹ ಕಾಲವು ಯುಗ–ಯುಗಾಂತರಗಳಲ್ಲಿಯೂ ಮರುಕಳಿಸಲಾರದು. ಈ ವಿಶೇಷ ಸಮಯಕ್ಕೆ, 'ಮಜನೂ ಅಡವಿಯನ್ನೇ ಮನೆಯಾಗಿ ಮಾಡಿಕೊಂಡರೆ, ನಾನು ಮನೆಯನ್ನೇ ಅಡವಿಯನ್ನಾಗಿ ಮಾಡಿಕೊಂಡೆ' ಎಂಬ ನಾಣ್ನುಡಿ ಅನ್ವಯಿಸುತ್ತದೆ." ಪ್ರೇಮದಲ್ಲಿ ಹುಚ್ಚನಾದ ಸುವಿಖ್ಯಾತ ಪ್ರೇಮಿ ಮಜನೂ, ನಾಗರಿಕತೆಯನ್ನೇ ತೊರೆದು ಅಡವಿಯಲ್ಲಿ ಅಲೆದಾಡಿದ. ಅದಕ್ಕೆ ವಿರುದ್ಧವಾಗಿ, ಸದ್ಗುರು ಲಾಲಾಜಿಯವರು ತಮ್ಮ ಶಿಷ್ಯನಿಗಾಗಿ, ತಮ್ಮ ಸ್ವರ್ಗಸದೃಶ ಮನೆಯನ್ನೇ ಹಂಬಲದ ಅಡವಿಯನ್ನಾಗಿ ಮಾಡಿಕೊಂಡರು.

ಬಾಬೂಜಿಯವರ ಅರ್ಹತೆಯ ಪ್ರಮಾಣವನ್ನು ಶ್ರೀ ಕೃಷ್ಣ ಭಗವಾನನು ಅತ್ಯುನ್ನತ ವರ್ಗೀಕರಣವಾದ ಅನುತ್ತರ ಎಂದು ವಿವರಿಸುತ್ತಾನೆ. ಆತನು, "ಅಸದೃಶರಾದ ಇಂತಹ ಅರ್ಹತೆಯುಳ್ಳವರು (ಅನುತ್ತರ) ನೂರಾರು ಅಥವಾ ಸಾವಿರಾರು ವರ್ಷಗಳಲ್ಲೊಮ್ಮೆ ಅನಿರೀಕ್ಷಿತವಾಗಿ ಜನಿಸುತ್ತಾರೆ. ಇಂತಹ ಅರ್ಹತೆಯುಳ್ಳ ವ್ಯಕ್ತಿಯು ದಿವ್ಯಾದೇಶದಂತೆ ಜನ್ಮತಾಳುವನು. ಅದಕ್ಕೆ ನೀನೇ ದೃಷ್ಟಾಂತ" ಎನ್ನುತ್ತಾನೆ.

1931ರಲ್ಲಿ ಲಾಲಾಜಿಯವರು ತಮ್ಮ ಭೌತಿಕದೇಹವನ್ನು ತೊರೆದಾಗ, ಬಾಬೂಜಿಯವರು ಬರೆಯುತ್ತಾರೆ, "ನಿಜ ಹೇಳಬೇಕೆಂದರೆ, ನನ್ನ ಗುರುಗಳು ಕಾಲವಾಗಿಲ್ಲ, ಆದರೆ ನಾನೇ ಮೃತನಾದಂತೆ ಅನಿಸಿತು." ನಂತರ ಅನೇಕ ವರ್ಷಗಳ ಕಾಲ ಅವರ ದಿನಚರಿ ಬಹುತೇಕ ಮೌನ ತಾಳಿತ್ತು. ಲಾಲಾಜಿಯವರು ಜೀವಂತವಾಗಿದ್ದಾಗ ಯಥೇಚ್ಛವಾಗಿ ದಿನಚರಿ ಬರೆದ ಶಿಷ್ಯ, ಸುಪ್ತ ಸ್ಥಿತಿಯನ್ನು ಪ್ರವೇಶಿಸಿದ್ದರು; ಆ ಅಂಧಕಾರದಲ್ಲಿ ಏನೋ ಒಂದು ಮೊಳಕೆಯೊಡೆಯಬೇಕಿತ್ತು.

ನಂತರ, 1944ರಲ್ಲಿ ಅವರ ಸಂವಹನ ಮರುಸ್ಥಾಪಿತಗೊಂಡಿತ್ತು. ಭೌತಿಕ ಮರಣ ಕೊನೆಗೊಳಿಸಿದಂತೆ ಕಂಡ ಸಂಬಂಧದ ರೂಪವು ಕೇವಲ ಪರಿವರ್ತಿತಗೊಂಡಿತ್ತು. ಲಾಲಾಜಿಯವರು ನಿರ್ದೇಶಿಸುವುದನ್ನು, ಪ್ರಾಣಾಹುತಿ ನೀಡುವುದನ್ನು ಹಾಗು ಪ್ರೀತಿಸುವುದನ್ನು ಮುಂದುವರಿಸಿದರು. ಅವರ ಬಾಂಧವ್ಯ ಮೃತ್ಯುವನ್ನು ಮೀರಿತ್ತು, ಅವರ ಪ್ರೇಮವು ಶರೀರವನ್ನು ಮೀರಿತ್ತು ಹಾಗು ಪ್ರಾಣಾಹುತಿ ಮುಂದುವರಿಯಿತು.

ಬಸಂತ ಪಂಚಮಿಯಂದು ನಾನು ಇವೆಲ್ಲವನ್ನೂ ಏಕೆ ಹೇಳುತ್ತಿದ್ದೇನೆ? ಏಕೆಂದರೆ ನಿಮ್ಮೆಲ್ಲರಿಗೂ ಏನು ಲಭ್ಯವಿದೆಯೆಂದು ತಿಳಿಸಬೇಕಾಗಿದೆ.

ನೀವು ಧ್ಯಾನಕ್ಕೆ ಕುಳಿತಾಗ ಆ ಕೋಮಲ ಕಲಕುವಿಕೆಯನ್ನು ನಿಮ್ಮ ಹೃದಯದಲ್ಲಿ ಅನುಭವಿಸಿದಾಗ, ನೀವು ಲಾಲಾಜಿ ಮತ್ತು ಬಾಬೂಜಿಯವರ ನಡುವೆ ಪ್ರವಹಿಸಿದ ಅದೇ ಪ್ರವಾಹವನ್ನು ಸ್ಪರ್ಶಿಸುತ್ತಿದ್ದೀರಿ. ನೀವು ಪ್ರಾಣಾಹುತಿಯನ್ನು ಸ್ವೀಕರಿಸಿದಾಗ, ಅಗಣಿತ ಪೀಳಿಗೆಗಳ ಹಿಂದೆ ಕಳೆದುಹೋಗಿದ್ದು, ಮನುಕುಲಕ್ಕಾಗಿ ಮರಳಿ ಪಡೆಯಲಾದ ಕಾಣಿಕೆಯನ್ನು ಸ್ವೀಕರಿಸುತ್ತಿದ್ದೀರಿ. ಹೆಸರಿಸಲಾಗದ ವಿಷಯದೆಡೆಗಿನ ಆ ಅನಿರ್ವಚನೀಯ ಹಂಬಲವನ್ನು ನೀವು ಅನುಭವಿಸಿದಾಗ, ರಾಧೆಯನ್ನೂ ಮೀರಿಸಿದ ಪ್ರೇಮದ ಪ್ರತಿಧ್ವನಿಯನ್ನು ಅನುಭವಿಸುತ್ತಿದ್ದೀರಿ.

ಇದು ನಮ್ಮ ಪಿತ್ರಾರ್ಜಿತ ಆಸ್ತಿ, ನಮ್ಮ ಜನ್ಮಸಿದ್ಧ ಹಕ್ಕು. 1873ರ ಬಸಂತ ಪಂಚಮಿಯಂದು ಶಿಶುವೊಂದು ಜನಿಸಿ, ನಂತರ ಗುರುವಾದ ಕಾರಣ ಹಾಗು ಸೃಷ್ಟಿಯ ಆರಂಭದಿಂದಲೂ ಸಂಭವಿಸದ ಅಭೂತಪೂರ್ವ ಪ್ರೇಮದೊಂದಿಗೆ ಶಿಷ್ಯನೊಬ್ಬನು ಆ ಗುರುವನ್ನು ಪ್ರೀತಿಸಿದ ಕಾರಣ ಇದು ನಮಗೆ ಲಭ್ಯವಿದೆ.

ವಸಂತದ ಹೂಗಳು ಅರಳುತ್ತವೆ, ಜಗತ್ತು ನವೀಕರಣಗೊಳ್ಳುತ್ತದೆ ಹಾಗು ಸಾಧನೆ ಮಾಡುತ್ತಿರುವ ಹೃದಯಗಳಲ್ಲಿ ಪ್ರಾಣಾಹುತಿ ತನ್ನ ಕೆಲಸ ಮುಂದುವರಿಸಿದಂತೆ, ಪ್ರತಿ ದಿನವೂ ಶಾಂತವಾಗಿ ಅದೇ ನವೀಕರಣ ಸಂಭವಿಸುತ್ತಿರುತ್ತದೆ.

ಈ ಬಸಂತ ಪಂಚಮಿಯಂದು, ಇದೆಲ್ಲವನ್ನೂ ಸಾಧ್ಯಗೊಳಿಸಿದ ವಿಭೂತಿ ಪುರುಷ ಪೂಜ್ಯ ಶ್ರೀ ಲಾಲಾಜಿ ಮಹಾರಾಜರ ಚರಣಗಳಲ್ಲಿ ನಾನು ಶಿರಬಾಗಿಸುತ್ತೇನೆ. ಹಾಗೆಯೆ ಎಂದಿಗೂ ಮುಚ್ಚಲಾಗದ ದ್ವಾರವನ್ನು ತೆರೆಸಿದ ಪ್ರೇಮವನ್ನು ನೀಡಿದ ಪೂಜ್ಯ ಶ್ರೀ ಬಾಬೂಜಿ ಮಹಾರಾಜರ ಚರಣಗಳಲ್ಲಿ ನಾನು ಶಿರಬಾಗಿಸುತ್ತೇನೆ.

ನಾವು ಈ ಪಿತ್ರಾರ್ಜಿತ ಸ್ವತ್ತಿನ ಹಕ್ಕುದಾರರು. ಎಂತಹ ಪರಂಪರೆ! ನಮ್ಮ ಕೈಗಳಿಗೆ ಎಂತಹ ಸಂಪತ್ತನ್ನು ನೀಡಲಾಗಿದೆ! ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ, ಈ ಸ್ವತ್ತನ್ನು ಏನು ಮಾಡುವುದು?

ಈ ಸಂದರ್ಭದಲ್ಲಿ ನಾವು ಸವಾಲನ್ನು ಸ್ವೀಕರಿಸೋಣ. ನಮ್ಮ ಆಧ್ಯಾತ್ಮಿಕ ಪಿತೃಗಳಿಗೆ ಸಂತೋಷ, ಆನಂದ ತರೋಣ. ದಿವ್ಯಲೋಕದಿಂದ ಕೆಳಗೆ ನಾವೆಲ್ಲರೂ ಏಕತೆಯಿಂದಿರುವುದನ್ನು, ಪರಸ್ಪರ ಪ್ರೇಮಾದರಗಳಿಂದ ಇರುವುದನ್ನು, ಅವರು ಜೀವಿಸಿದ ಉದ್ದೇಶವನ್ನು ನಾವೂ ಜೀವಿಸುವುದನ್ನು ಅವರು ಕಂಡು ಸಂತಸದಿಂದ ಕುಣಿಯಲಿ.



ನಾವು ಈ ಪಿತ್ರಾರ್ಜಿತ ಸ್ವತ್ತಿನ ಹಕ್ಕುದಾರರು. ಎಂತಹ ಪರಂಪರೆ! ನಮ್ಮ ಕೈಗಳಿಗೆ ಎಂತಹ ಸಂಪತ್ತನ್ನು ನೀಡಲಾಗಿದೆ! ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ, ಈ ಸ್ವತ್ತನ್ನು ಏನು ಮಾಡುವುದು?

ಈ ಪರಂಪರಾಗತ ವಂಶಾವಳಿಯನ್ನು ಉಳಿಸಿಕೊಂಡು, ಸಮೃದ್ಧವಾಗಿರಿಸಲು, ನಮ್ಮ ವರ್ತನೆ, ಆಲೋಚನೆ ಹಾಗು ಕೃತಿಗಳು ಅವರ ಮಟ್ಟಕ್ಕೆ ತಕ್ಕಂತಿರಬೇಕು. ಈ ಮಾರ್ಗವನ್ನು ಅನುಸರಿಸುವ ಎಲ್ಲ ಕುಟುಂಬಗಳಲ್ಲೂ ಸಾಮರಸ್ಯವಿರಲಿ. ಸಾಧಕರು ಒಟ್ಟುಗೂಡುವ ಪ್ರತಿಯೊಂದು ಕೇಂದ್ರದಲ್ಲೂ ಸಾಮರಸ್ಯವಿರಲಿ. ಆಧ್ಯಾತ್ಮಿಕ ಸಮುದಾಯಗಳಲ್ಲಿ ಕೆಲವೊಮ್ಮೆ ನುಸುಳುವ ಸಣ್ಣಪುಟ್ಟ ಒಡಕುಗಳು ಈ ವಸಂತ ಋತುವಿನ ಸೂರ್ಯನ ಸುಖೋಷ್ಣದಲ್ಲಿ ಕರಗಿಹೋಗಲಿ. ನಾವೆಲ್ಲರೂ ಒಂದೇ ಪರಂಪರೆಯ ಕೂಸುಗಳು, ಒಂದೇ ಪ್ರಾಣಾಹುತಿಯನ್ನು ಸ್ವೀಕರಿಸುವವರು, ಒಂದೇ ಗಂತವ್ಯದೆಡೆಗೆ ನಡೆಯುತ್ತಿರುವವರು – ಇದನ್ನು ನಾವೆಲ್ಲ ನೆನಪಿನಲ್ಲಿಡುವಂತಾಗಲಿ.


ತಮ್ಮ ಶ್ರೇಷ್ಠತಮ ಸಂಶೋಧನೆಯನ್ನು ತಮ್ಮ ಶಿಷ್ಯನ ಏಳಿಗೆಗಾಗಿ ಲಾಲಾಜಿಯವರು ನೀಡಬಲ್ಲರಾದರೆ ಹಾಗು ರಾಧೆಯ ಪ್ರೇಮವನ್ನೂ ಮೀರಿದಂತೆ ಬಾಬೂಜಿಯವರು ಲಾಲಾಜಿಯವರನ್ನು ಪ್ರೇಮಿಸಬಲ್ಲರಾದರೆ, ನಾವೂ ಕೂಡ ನಮ್ಮ ಸುತ್ತಮುತ್ತಲಿನ ಸೋದರ ಸೋದರಿಯರೆಡೆಗೆ ಸ್ನೇಹಹಸ್ತವನ್ನು ಚಾಚಿ, ಸಣ್ಣ ಸಣ್ಣ ದೂರುಗಳನ್ನು ಬಿಟ್ಟುಕೊಟ್ಟು, ನಮ್ಮೊಳಗೆ ಯಾವುದು ತುಂಬಿಕೊಳ್ಳುತ್ತಿದೆಯೊ ಅದಕ್ಕೆ ಅರ್ಹ ಪಾತ್ರೆಯಾಗಬಲ್ಲೆವು.

ಗುರುಮಹಾತ್ಮರ ಪ್ರೇಮ ನಿಮ್ಮ ಹೃದಯವನ್ನು ಸ್ಪರ್ಶಿಸಲಿ, ಪ್ರಾಣಾಹುತಿಯು ನಿಮ್ಮ ಇರುವಿಕೆಯನ್ನು ಪರಿವರ್ತಿಸಲಿ, ನೀವು ನಿಮ್ಮದೇ ವಿಧದಲ್ಲಿ ಅವರ ಪರಂಪರೆಯ ಜೀವಂತ ನಿದರ್ಶನವಾಗಿರಿ.

ಪ್ರೇಮಪೂರ್ವ ಪ್ರಾರ್ಥನೆಗಳೊಂದಿಗೆ,

ಕಮಲೇಶ್

ಬಸಂತ ಪಂಚಮಿ, ಜನವರಿ 23, 2026



## Masterclasses with Daaji

You can start Heartfulness meditation at any time! Join Daaji for a three-part masterclass series, where he shares the benefits of the Heartfulness way and explains how to add Heartfulness relaxation, meditation, cleaning and prayer to your daily routine. All masterclasses are free of charge.

https://heartfulness.org/global/masterclass/

## Heartfulness Practices

Discover Heartfulness practices-learn to relax, meditate, clean and pray.

https://heartfulness.org/in-en/heartfulness-practices/

heartfulness

purity weaves destiny

